# ಹೆಬ್ಬಾಳ್ ಕೃಷಿ ಪ್ರಯೋಗಾತ್ಮಕ ಫಾರಂ: ಚಾರಿತ್ರಿಕ ಹಿನ್ನೆಲೆ

**ಮಂಜುಕುಮಾರ**
ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ.

Article Link: https://aksharasurya.com/2024/04/manjukumar.php

DOI: https://doi.org/10.5281/zenodo.10929797

## ABSTRACT:

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ವ್ಯವಸಾಯದ ಅಭಿವೃದ್ಧಿಯು ಮೈಸೂರು ಸಂಸ್ಥಾನದ ಏಳಿಗೆಗೆ ಪೂರಕವೆಂದು ಅರಿತಿದ್ದರು. ಆದ್ದರಿಂದ ಆಧುನಿಕ ಯುಗದ ಅಗತ್ಯತೆಗೆ ತಕ್ಕಂತೆ ಕೃಷಿಯನ್ನು ಒಂದು ಲಾಭದಾಯಕ ಉದ್ಯಮವಾಗಿ ಪರಿವರ್ತಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ವೈಜ್ಞಾನಿಕ ಪ್ರಜ್ಞೆಯಿಂದ ಪ್ರಾಯೋಗಿಕ ಕಾರ್ಯ ತಂತ್ರಗಳನ್ನು ರೂಪಿಸಲು ಪ್ರಯತ್ನಿಸಿದರು. ಅಂತೆಯೇ ಪ್ರಾತ್ಯಕ್ಷಿಕ ಪ್ರಯೋಗಗಳ ಮೂಲಕ ರೈತಾಪಿ ವರ್ಗವು ಆಧುನಿಕಾಂಶಗಳನ್ನು ಅನುಕರಣೆ ಮಾಡುವಂತೆ ಉತ್ತೇಜನವನ್ನು ನೀಡಿದರು. ಇಪ್ಪತ್ತನೇ ಶತಮಾನದಲ್ಲಿ ರಾಜಪ್ರಭುತ್ವದಿಂದ ದೊರೆತ ನೀರಾವರಿ ಸೌಲಭ್ಯ, ಆಧುನಿಕ ಕೃಷಿಯ ಸಲಕರಣೆಗಳ ಪೂರೈಕೆ, ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಸರಬರಾಜು, ಬೆಳೆ ಸಾಲ ಸೌಲಭ್ಯ ಮುಂತಾದ ಅಂಶಗಳು ಕೃಷಿಯನ್ನು ಆಧುನೀಕರಣಗೊಳಿಸಿದ್ದವು. ಸರ್ಕಾರವು ಕೃಷಿಯ ಅಭಿವೃದ್ಧಿಗಾಗಿ ಪ್ರಯೋಗಾತ್ಮಕ ಫಾರಂಗಳ ಸ್ಥಾಪನೆ, ಪ್ರಾತ್ಯಕ್ಷಿಕ ಪ್ರಯೋಗಗಳ ಮೂಲಕ ಕೃಷಿಕರಿಗೆ ತರಬೇತಿ, ಕೃಷಿ ಉತ್ಪನ್ನಗಳ ವಸ್ತುಪ್ರದರ್ಶನದ ಆಯೋಜನೆ, ಕಬ್ಬಿನ ವ್ಯವಸಾಯಕ್ಕೆ ಪ್ರೋತ್ಸಾಹ, ಕೃಷಿ ಸಂಬಂಧಿತ ಮಾಹಿತಿಯ ವಿನಿಮಯ ಕಾರ್ಯಕ್ರಮ ಮುಂತಾದ ಕಾರ್ಯಯೋಜನೆಗಳನ್ನು ರೂಪಿಸಿತ್ತು. ಇದು ಮೈಸೂರು ರಾಜ್ಯದ ಆರ್ಥಿಕ ಸದೃಢತೆಗೆ ಅವಕಾಶವನ್ನು ಒದಗಿಸಿತ್ತು. ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಆಧುನಿಕತೆಯ ವೈಚಾರಿಕ ವಿಚಾರಧಾರೆಗಳು ಮೈಸೂರು ರಾಜ್ಯದ ಆರ್ಥಿಕತೆಯ ಸ್ಥಾನಪಲ್ಲಟಕ್ಕೆ ಸುಭದ್ರವಾದ ತಳಹದಿಯನ್ನು ನಿರ್ಮಿಸಿ ಪೋಷಣೆ ಮಾಡಿದ್ದವು. ಪ್ರಸ್ತುತ ಲೇಖನದಲ್ಲಿ ಹೆಬ್ಬಾಳ್ ಫಾರಂನ ಸ್ಥಾಪನೆ ಮತ್ತು ಅದರ ಮಹತ್ವದ ಬಗ್ಗೆ ಚರ್ಚಿಸಲಾಗಿದೆ.

## KEYWORDS:

ಫಾರಂ, ಪ್ರಾತ್ಯಕ್ಷಿಕ ಪ್ರಯೋಗ, ಕೋಲಾರ ಮಿಷನ್ ನೇಗಿಲು, ಹೆಬ್ಬಾಳ್, ರೋಗಬಾಧೆ.

ಮೈಸೂರು ರಾಜಪ್ರಭುತ್ವವು ಮೈಸೂರು ಸಂಸ್ಥಾನದ ಕೃಷಿ ಕ್ಷೇತ್ರದಲ್ಲಿ ಪ್ರಯೋಗಶೀಲತೆಯ ಮೂಲಕ ನವೀನ ತಳಿಯ ಅನ್ವೇಷಣೆ ಮತ್ತು ಆಧುನಿಕ ಬೇಸಾಯ ವಿಧಾನಗಳನ್ನು ಅನುಸರಿಸಲು ಆಲೋಚಿಸಿತು. ಈ ಸಂದರ್ಭದಲ್ಲಿ ವಿಶ್ವೇಶ್ವರಯ್ಯನವರು ಪ್ರಯೋಗಾತ್ಮಕ ಫಾರಂಗಳನ್ನು ಸ್ಥಾಪಿಸುವ ಪ್ರಸ್ತಾಪವನ್ನು ಸರ್ಕಾರದ ಮುಂದಿಟ್ಟರು. ವಿಶ್ವೇಶ್ವರಯ್ಯನವರು ಇಂತಹ ಕೃಷಿ ಕೇಂದ್ರಗಳಲ್ಲಿ ಕೈಗೊಳ್ಳುವ ಸಂಶೋಧನೆಗಳಿಂದ ರೈತರಿಗೆ ಪ್ರತ್ಯಕ್ಷವಾಗಿ ದೊರಕುವ ಅನುಭವವು ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಲು ಉಪಯುಕ್ತವಾಗುತ್ತದೆ ಎಂದು ತಿಳಿಸಿದರು. ಇದರಿಂದ ಪ್ರೇರೇಪಣೆಗೊಂಡ ಸರ್ಕಾರವು ವ್ಯವಸಾಯ, ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆಗಳ ಕಾರ್ಯವ್ಯಾಪ್ತಿಯಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿತ್ತು. ಈ ಕ್ರಮಗಳ ಮೂಲಕ ಸರ್ಕಾರವು ಆರ್ಥಿಕಾಭಿವೃದ್ಧಿಯ ಪ್ರಕ್ರಿಯೆಯಲ್ಲಿ ವೈಜ್ಞಾನಿಕತೆಯ ವಿಧಾನವನ್ನು ಅಳವಡಿಕೊಳ್ಳಲು ಪ್ರಯತ್ನಿಸಿತು.

ಕೃಷಿ ಫಾರಂಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಪ್ರತ್ಯೇಕವಾಗಿ ನಿರ್ದಿಷ್ಟ ಕ್ಷೇತ್ರದ ಬಗ್ಗೆ ಪ್ರಯೋಗಗಳನ್ನು ನಡೆಸಲು ಸೂಕ್ತವಾದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಇದೇ ಉದ್ದೇಶಕ್ಕಾಗಿ ಫಾರಂಗಳಲ್ಲಿ ರಾಸಾಯನಿಕ, ಕೀಟಶಾಸ್ತ್ರ, ಶಿಲೀಂಧ್ರಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಎಂಜಿನಿಯರಿಂಗ್ ಎಂಬ ವಿಭಾಗಗಳನ್ನು ಸ್ಥಾಪಿಸಲಾಗಿತ್ತು. ಅದರಂತೆ ಮೈಸೂರು ಸಂಸ್ಥಾನದ ಕೃಷಿ ಕ್ಷೇತ್ರದಲ್ಲಿ ಆಧುನಿಕತೆ ಮತ್ತು ಪಾಶ್ಚಿಮಾತ್ಯ ವಿಚಾರಧಾರೆಗಳನ್ನು ಅನುಸರಿಸಲು ನಿರ್ಧರಿಸಲಾಯಿತು.

ಪ್ರಾಯೋಗಿಕ ಕಾರ್ಯಕ್ಷೇತ್ರವನ್ನು ಕೇಂದ್ರಿಯ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ಸ್ಥಾಪಿಸುವ ಮೂಲಕ ರೈತರಿಗೆ ಹೊಸ ಬೇಸಾಯ ವಿಧಾನಗಳ ಬಗ್ಗೆ ಅರಿವನ್ನು ಮೂಡಿಸಲು ಪ್ರಯತ್ನಿಸುವುದು ಅಗತ್ಯವೆಂದು ಸೂಚಿಸಲಾಯಿತು. ಮಣ್ಣಿನ ಪರೀಕ್ಷೆ, ರಸಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯ ಕುರಿತು ರೈತರಿಗೆ ಪ್ರಾತ್ಯಕ್ಷಿಕ ವಿಧಾನದ ಮೂಲಕ ತಿಳಿಸುವುದು. ಕೃಷಿಯಲ್ಲಿನ ಪ್ರಮುಖ ಸಮಸ್ಯೆ ಎಂದರೆ ಬೆಳೆಗಳಲ್ಲಿ ಕಂಡುಬರುವ ರೋಗಬಾಧೆ. ಇದರಿಂದ ಉಂಟಾಗುವ ನಷ್ಟದಿಂದ ಪಾರಾಗಲು ವೈಜ್ಞಾನಿಕ ಕ್ರಿಮನಾಶಕಗಳ ಬಳಕೆಯ ಬಗ್ಗೆ ಜಾಗೃತಿಯನ್ನು ಮೂಡಿಸುವುದು ಮತ್ತು ಫಾರಂಗಳಲ್ಲಿ ವಿವಿಧ ರೋಗಗಳ ಕುರಿತು ಕೃಷಿ ತಜ್ಞರು ಅಧ್ಯಯನವನ್ನು ಕೈಗೊಂಡು ಪರಿಹಾರ ಕ್ರಮಗಳನ್ನು ಕಂಡುಹಿಡಿದು ರೈತರಿಗೆ ಸೂಚಿಸುವುದು. ಹೆಚ್ಚು ಇಳುವರಿ ನೀಡುವಂತಹ ತಳಿಗಳ ಅಭಿವೃದ್ಧಿಯ ಕಾರ್ಯದಲ್ಲಿ ತಜ್ಞರು ನಿರತರಾಗುವುದು. ಸುಧಾರಿತ ಕೃಷಿ ಉಪಕರಣಗಳನ್ನು ತಯಾರಿಸಿ ರೈತರಿಗೆ ಪೂರೈಸಿ ಕೃಷಿ ಕಾರ್ಯದಲ್ಲಿ ಬಳಸುವಂತೆ ಉತ್ತೇಜಿಸುವುದು. ಈ ಎಲ್ಲಾ ಅಂಶಗಳು ಪ್ರಯೋಗಾತ್ಮಕ ಫಾರಂಗಳ

ಸ್ಥಾಪನೆಯ ಉದ್ದೇಶಗಳಾಗಿದ್ದವು.

1924ರಲ್ಲಿ ಬೆಂಗಳೂರಿನಲ್ಲಿ ಬೋರ್ಡ್ ಆಫ್ ಅಗ್ರಿಕಲ್ಚರ್ ಇನ್ ಇಂಡಿಯಾ ಎಂಬ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಈ ಸಮಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲು ಉದ್ದೇಶಿಸಲಾಗಿರುವ ಪ್ರಯೋಗಾತ್ಮಕ ಕೃಷಿ ಸಂಶೋಧನಾ ಕೇಂದ್ರಗಳ ಕಾರ್ಯವ್ಯಾಪ್ತಿ, ವಿಧಾನ, ಉಪಯುಕ್ತತೆ ಮತ್ತು ಮಹತ್ವದ ಬಗ್ಗೆ ಸವಿಸ್ತಾರವಾಗಿ ಜನತೆಗೆ ಮನವರಿಕೆ ಮಾಡಿಕೊಟ್ಟರು. ಫಾರಂಗೆ ಸೇರಿದ ನಿರ್ದಿಷ್ಟ ಪ್ರದೇಶದಲ್ಲಿ ಬೆಳೆಯನ್ನು ವೈಜ್ಞಾನಿಕ ಕ್ರಮಗಳನ್ನು ಅನುಸರಿಸಿ ಬೆಳೆಯುವ ಮೂಲಕ ಅನಕ್ಷರಸ್ಥರಾದ ರೈತರಿಗೆ ಪ್ರತ್ಯೇಕ್ಷವಾಗಿ ತರಬೇತಿಯನ್ನು ನೀಡಬಹುದಾಗಿತ್ತು. ಬಾಹ್ಯ ಪ್ರಯೋಗ ಶಾಲೆಗಳಾದ ಕೃಷಿ ಫಾರಂಗಳಲ್ಲಿ ಲಾಭದಾಯಕ ಕೃಷಿ ಉತ್ಪಾದನೆ ಮತ್ತು ಹೈನುಗಾರಿಕೆಯ ಉತ್ತಮ ವಿಧಾನದ ಕುರಿತಾದ ವಿಚಾರಗಳನ್ನು ರೈತರು ಗ್ರಹಿಸಬಹುದಾಗಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ವ್ಯವಸಾಯವನ್ನು ಒಂದು ಉದ್ಯಮವೆಂದು ಪರಿಗಣಿಸಿದ್ದರು. ಕೃಷಿ ಉತ್ಪಾದನೆಯಲ್ಲಿ ಉಂಟಾಗುವ ಸಮಸ್ಯೆಗಳನ್ನು ನಿವಾರಿಸುವ ನೆಲೆಯಲ್ಲಿ ಕೃಷಿ ಫಾರಂಗಳನ್ನು ವೈಜ್ಞಾನಿಕ ಸಂಶೋಧನಾ ಕೇಂದ್ರದ ಮಾದರಿಯಲ್ಲಿ ಬಳಸಬಹುದೆಂದು ತಿಳಿಸಿದರು. ಜೊತೆಗೆ ರಾಜ್ಯ ವ್ಯವಸಾಯ ಇಲಾಖೆಯು ಪ್ರಯೋಗಾತ್ಮಕ ಫಾರಂಗಳನ್ನು ಹಣದ ಉದ್ದೇಶಕ್ಕಾಗಿ ನಿರ್ವಹಿಸಬಾರದೆಂಬ ಸಲಹೆಯನ್ನು ನೀಡಿದರು. ಏಕೆಂದರೆ ಇದರಲ್ಲಿ ಸಂಪೂರ್ಣ ರಾಜ್ಯದ ಕೃಷಿ ಕ್ಷೇತ್ರದ ಭವಿಷ್ಯವು ಅಡಗಿತ್ತು. ಫಾರಂಗಳಿಂದ ಉಂಟಾಗುವ ಲಾಭಕ್ಕಿಂತ ಅದರಲ್ಲಿ ಕೈಗೊಳ್ಳುವ ಸಂಶೋಧನೆಯ ಫಲಿತವು ಹೆಚ್ಚು ಮಹತ್ವವನ್ನು ಪಡೆದಿತ್ತು. ಆದ್ದರಿಂದ ಕೃಷಿ ಕ್ಷೇತ್ರದಲ್ಲಿ ಉಂಟಾಗುವ ಪರಿವರ್ತನೆಯು ವ್ಯವಸಾಯ ಇಲಾಖೆಯು ಸಾಧಿಸಿದ ಯಶಸ್ಸಿನ ಸಂಕೇತವಾಗಿರುತ್ತದೆ ಎಂಬ ವಿಷಯವನ್ನು ಅಧಿಕಾರಿವರ್ಗ ಮತ್ತು ಪ್ರಜೆಗಳಿಗೆ ಮನವರಿಕೆ ಮಾಡಿಕೊಟ್ಟರು.

ಪಾಶ್ಚಾತ್ಯ ದೇಶಗಳಲ್ಲಿನ ತಂತ್ರಜ್ಞಾನದ ಪ್ರೇರಣೆಯಿಂದ ಮೈಸೂರು ರಾಜ್ಯದ ಕೃಷಿ ಕ್ಷೇತ್ರದಲ್ಲಿ ಪ್ರಯೋಗಾತ್ಮಕ ಫಾರಂಗಳ ಸ್ಥಾಪನೆಯಂತಹ ಕಾರ್ಯಯೋಜನೆಯನ್ನು ಅನುಷ್ಠಾನಕ್ಕೆ ತರಲಾಯಿತು. ನಂತರ ಅವುಗಳನ್ನು ರಾಜ್ಯದಾದ್ಯಂತ ವಿಸ್ತರಿಸಿ ವ್ಯವಸಾಯ ಕ್ಷೇತ್ರವನ್ನು ಆಧುನೀಕರಣಗೊಳಿಸಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ರಾಜ್ಯದ ವ್ಯವಸಾಯ ಕ್ಷೇತ್ರದ ಪ್ರಗತಿಯ ಹಿತಾಸಕ್ತಿಯಿಂದ ಸ್ಥಾಪಿಸಿದ ಹೆಬ್ಬಾಳ ಕೃಷಿ ಫಾರಂ ಮೈಸೂರು ಸಂಸ್ಥಾನದ ಪ್ರಥಮ ಪ್ರಾಯೋಗಿಕ ಫಾರಂ ಆಗಿದೆ. ಈ ಫಾರಂನ್ನು ಮೇ 6, 1905ರಲ್ಲಿ ಬೆಂಗಳೂರಿನಿಂದ

ಐದು ಮೈಲಿ ದೂರದಲ್ಲಿರುವ ಹೆಬ್ಬಾಳ ಎಂಬ ಗ್ರಾಮದಲ್ಲಿ ಸ್ಥಾಪಿಸಲಾಗಿತ್ತು. ಹೆಬ್ಬಾಳ ಫಾರಂ ಬೇಸಾಯಕ್ಕೆ ಯೋಗ್ಯವಾದ ಮೂವತ್ತೊಂದು ಎಕರೆ ಭೂ ಪ್ರದೇಶದಲ್ಲಿ ಕೃಷಿ ಸಂಶೋಧನಾ ಕಾರ್ಯಚಟುವಟಿಕೆಯನ್ನು ಆರಂಭಿಸಿತ್ತು. ತದನಂತರ ತನ್ನ ಭೂ ಪ್ರದೇಶದ ವ್ಯಾಪ್ತಿಯನ್ನು ವಿಸ್ತಾರಗೊಳಿಸಿಕೊಂಡಿತ್ತು. 1911ರಲ್ಲಿ ಹೊಸದಾಗಿ 21 ಎಕರೆಯನ್ನು ಫಾರಂನ ಅಧೀನಕ್ಕೆ ಒಳಪಡಿಸಲಾಯಿತು. ಹೆಬ್ಬಾಳ ಫಾರಂನಲ್ಲಿ ಒಟ್ಟು 20 ಎಕರೆ ನೀರಾವರಿ ಮತ್ತು 60 ಎಕರೆ ಒಣ ಭೂಮಿಯಲ್ಲಿ ಪ್ರಾಯೋಗಿಕ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿತ್ತು.

1913ರಲ್ಲಿ ಹೆಬ್ಬಾಳ ಫಾರಂನಲ್ಲಿ ಕೃಷಿ ಶಿಕ್ಷಣದ ಉದ್ದೇಶಕ್ಕಾಗಿ ಒಂದು ಶಾಲೆಯನ್ನು ಆರಂಭಿಸಲಾಯಿತು. ಇದರೊಂದಿಗೆ ಫಾರಂ ವ್ಯಾಪ್ತಿಯಲ್ಲಿ ಹಾಸ್ಟೆಲ್, ಪಶು ವೈದ್ಯಕೀಯ ಆಸ್ಪತ್ರೆ, ಹಾಲಿನ ಡೈರಿ ಮತ್ತು ಕೋಳಿಫಾರಂನ್ನು ಸ್ಥಾಪಿಸಲಾಗಿತ್ತು. ಹೆಬ್ಬಾಳ ಫಾರಂನ್ನು ರಸಾಯನಶಾಸ್ತ್ರಜ್ಞರಾಗಿದ್ದ ಎ. ಲೆಹ್ಮನ್‌ರವರು ವಿನ್ಯಾಸಗೊಳಿಸಿದ್ದರು. 1914ರಲ್ಲಿ ಮೈಸೂರು ಸರ್ಕಾರವು ಬ್ರಿಟಿಷರ ಅಧೀನದಲ್ಲಿದ್ದ 22 ಎಕರೆ ವ್ಯವಸಾಯ ಭೂಮಿಯನ್ನು ಗುತ್ತಿಗೆ ಪಡೆಯಿತು. ಅದನ್ನು ಸಹ ಹೆಬ್ಬಾಳ ಫಾರಂನ ಪ್ರಾಯೋಗಿಕ ಕ್ಷೇತ್ರದ ವ್ಯಾಪ್ತಿಗೆ ಒಳಪಡಿಸಲಾಗಿತ್ತು.

ಕೋಲ್ಮನ್‌ರು ಕೃಷಿ ಉಪಕರಣಗಳನ್ನು ಆಧುನೀಕರಣಗೊಳಿಸುವ ದೃಷ್ಟಿಯಿಂದ ಹೆಬ್ಬಾಳ ಫಾರಂನಲ್ಲಿ 'ಕೋಲಾರ ಮಿಷನ್' ಎಂಬ ಮಾದರಿಯ ನೇಗಿಲುಗಳನ್ನು ತಯಾರಿಸುವ ಕಾರ್ಯಕ್ಕೆ ಚಾಲನೆಯನ್ನು ನೀಡಿದರು. ಹೆಬ್ಬಾಳ ಫಾರಂನಲ್ಲಿ ಉತ್ಪಾದನೆಯಾದ ನೇಗಿಲುಗಳನ್ನು ಸರ್ಕಾರದ ಮೂಲಕ ರೈತರಿಗೆ ವಿತರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಈ ಫಾರಂನಲ್ಲಿ ಪ್ರಮುಖವಾಗಿ ಭತ್ತ, ಕಬ್ಬು, ರಾಗಿ ಮತ್ತು ನೆಲಗಡಲೆ ಬೆಳೆಗಳ ಕುರಿತಾದ ಪ್ರಾಯೋಗಿಕ ಸಂಶೋಧನೆ ಮತ್ತು ತಳಿ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವುದಕ್ಕೆ ಆದ್ಯತೆಯನ್ನು ನೀಡಲಾಗುತ್ತಿತ್ತು. ಇದರ ಜಮೀನಿನಲ್ಲಿ ಪ್ರಾಯೋಗಿಕವಾಗಿ ಉತ್ಪಾದಿಸಲಾದ ಹೆಚ್ಚು ಇಳುವರಿಯನ್ನು ನೀಡುವಂತಹ ಕಬ್ಬು, ರಾಗಿ ಮತ್ತು ಭತ್ತದ ಬಿತ್ತನೆ ಬೀಜವು ಮೈಸೂರು ರಾಜ್ಯದಾದ್ಯಂತ ರೈತರಿಗೆ ಬೃಹತ್ ಪ್ರಮಾಣದಲ್ಲಿ ಪೂರೈಕೆಯಾಗುತ್ತಿತ್ತು.

ಹೆಬ್ಬಾಳ್ ಕೃಷಿ ಫಾರಂ ರಾಜ್ಯದ ವ್ಯವಸಾಯ ಮತ್ತು ಆರ್ಥಿಕ ಪ್ರಗತಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಜೊತೆಗೆ ಆಧುನಿಕ ತಂತ್ರಜ್ಞಾನವನ್ನು ಪ್ರವಹಿಸುವ ಕಾರ್ಯದಲ್ಲಿ ಸಕ್ರಿಯವಾಗಿ ದುಡಿಯುತ್ತಿದೆ. ಆದ್ದರಿಂದ ಸರ್ಕಾರವು ರೈತರಿಗೆ ಕೃಷಿ ಶಿಕ್ಷಣ, ತರಬೇತಿ ಮತ್ತು ಪ್ರಾಯೋಗಿಕ ಸಂಶೋಧನೆಯ ಬಗ್ಗೆ ಅರಿವನ್ನು ಮೂಡಿಸುವ ದೃಷ್ಟಿಯಿಂದ ಹೆಬ್ಬಾಳ್ ಕೃಷಿ ಫಾರಂಗೆ ಹೆಚ್ಚಿನ

ಉತ್ತೇಜನವನ್ನು ನೀಡುವುದು ಅವಶ್ಯಕವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಹಯವದನ ರಾವ್ ಸಿ. (ಸಂ). (1929). ಮೈಸೂರ್ ಗೆಜೆಟಿಯರ್: ಸಂಪುಟ–3. ಬೆಂಗಳೂರು.
2. ದಿ ಮೈಸೂರು ಬ್ಲ್ಯೂ ಬುಕ್ ಜರ್ನಲ್: ಸಂಪುಟ–3. ಬೆಂಗಳೂರು. 1918–1919.
3. ಸ್ಪೀಚಸ್ ಬೈ ಹಿಸ್ ಹೈನೆಸ್. (1934). ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಮಹಾರಾಜ ಆಫ್ ಮೈಸೂರ್, 1902–1933, ಸಂಪುಟ–1, ಮೈಸೂರು.
4. ಅಗ್ರಿಕಲ್ಚರ್ ಇನ್ ಮೈಸೂರು. (1939). ಮೈಸೂರು ಸರ್ಕಾರದ ಪ್ರಕಟಣೆ. ಬೆಂಗಳೂರು.